ಆದೇಶ ಹೊರಡಿಸಿರುತ್ತದೆ. ಸರ್ಕಾರಿ ಭೂಮಿ ಲಭ್ಯವಿಲ್ಲದೆ ಕಡೆಗಳಲ್ಲಿ ಖಾಸಗಿ ಜಮೀನುಗಳನ್ನು ನೇರವಾಗಿ ಈಗ ಖರೀದಿಸುತ್ತಿರುವುದರಿಂದ, ವಿದ್ಯುತ್ ಉಪಕೇಂದ್ರಗಳ ನಿರ್ಮಾಣವನ್ನು ಕೈಗೊಳ್ಳುವಲ್ಲಿ ಅಷ್ಟೇನು ವಿಳಂಬವಾಗುತ್ತಿಲ್ಲ.

ಆ) ಖಾಸಗಿ ಜಮೀನುಗಳನ್ನು ವಿದ್ಯುತ್ ಉಪ–ಕೇಂದ್ರಗಳ ನಿರ್ಮಾಣಕ್ಕೆ ಭೂಮಾಲೀಕರಿಂದ ಖರೀದಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಭೂ ಬೆಲೆ ನಿಗದೀಕರಣ ಸಮಿತಿಯನ್ನು ಸರ್ಕಾರವು ರಚಿಸಿರುತ್ತದೆ. ಭೂ ಮಾಲೀಕರು ಒಪ್ಪುವ ಹಾಗೂ ಮಾರುಕಟ್ಟೆ / ಮಾರ್ಗಸೂಚಿ ಬೆಲೆಗಳ ಆಧಾರದ ಮೇಲೆ ಕಂದಾಯ ಇಲಾಖೆಯು ನೀಡಿರುವ ನಿರ್ದೇಶನಗಳ ಪ್ರಕಾರ ಜಮೀನುಗಳನ್ನು ಖರೀದಿಸುವ ಪದ್ಧತಿ ಈಗಾಗಲೇ ಜಾರಿಯಲ್ಲಿರುತ್ತದೆ.

ಪ್ರಶ್ನೆ ಸಂಖ್ಯೆ : 69 (217) ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ (ಬೀಳಗಿ)

ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಬೀಳಗಿ ಮತ ಕ್ಷೇತ್ರ ವ್ಯಾಪ್ತಿಯಲ್ಲಿ 33/11, 110/33 ಕೆ.ವಿ. ಸಾಮರ್ಥ್ಯದ ವಿದ್ಯುತ್ ವಿತರಣಾ ಸ್ಥಾವರಗಳೆಷ್ಟು

ಆ) ಈಗ ಕೈಗೆತ್ತಿಕೊಂಡಿರುವ ಸ್ಥಾವರ ಸಂಖ್ಯೆಗಳು

ಇ) ಹೊಸ ಸ್ಥಾವರಗಳಿಗೆ ಪಡೆದುಕೊಂಡ ಜಮೀನುಗಳ ರೈತರಿಗೆ ಅವರು ನೀಡಿದ ಜಮೀನಿಗೆಪರಿಹಾರ ನೀಡಲಾಗಿದೆಯೇ;

ಈ) ಇಲ್ಲವಾದಲ್ಲಿ, ಕಾರಣಗಳೇನು;

ಉ) ಕೋಲಾರ ಮತ್ತು ಅನಗವಾಡಿ ವಿದ್ಯುತ್ ವಿತರಣಆ ಕೇಂದ್ರಗಳಿಗೆ ಜಮೀನು ನೀಡಿದ ರೈತರಿಗೆ ನಿಗದಿತ ಸಮಯದಲ್ಲಿ ಪರಿಹಾರ ನೀಡದಿರುವ ಬಗ್ಗೆ ಸರ್ಕಾರದ ಕ್ರಮಗಳೇನು;

ಶ್ರೀ ಹೆಚ್.ಡಿ.ರೇವಣ್ಣ

ಅ) ಬೀಳಗಿ ಮತ ಕ್ಷೇತ್ರ ವ್ಯಾಪ್ತಿಯಲ್ಲಿ ಐದು 33/11 ಕೆ.ವಿ. ಮತ್ತು ಐದು 110/33/11 ಕೆ.ವಿ. ವಿದ್ಯುತ್ ಉಪ-ಕೇಂದ್ರಗಳು ಹಾಲಿ ಕಾರ್ಯನಿರ್ವಹಿಸುತ್ತಿವೆ.

ಆ) ಬೀಳಗಿ ಮತಕ್ಷೇತ್ರದ್ದಿಲ್ಲ ಹಾಲಿ ಮೂರು ಹೊಸ 110/33/11 ಕೆ.ವಿ. ವಿದ್ಯುತ್ ಉಪ ಕೇಂದ್ರಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಇ)&ಈ) ಬೀಳಗಿ ಮತಕ್ಷೇತ್ರದಲ್ಲಿ ಹೊಸದಾಗಿ ಸ್ಥಾಪಿಸುತ್ತಿರುವ 3 ವಿದ್ಯುತ್ ಉಪ ಕೇಂದ್ರಗಳ ಪೈಕಿ ಗಿರಿಸಾಗರ ಹಾಗೂ ಮರೆಗುದ್ದಿ ಉಪಕೇಂದ್ರಗಳ ಸ್ಥಾಪನೆಗೆ ಜಮೀನು ನೀಡಿದ ರೈತರುಗಳಿಗೆ ಪರಿಹಾರ ಧನ ನೀಡಲಾಗಿದೆ.

ಶಿರಗುಪ್ಪಿ ಗ್ರಾಮದಲ್ಲಿ ಸ್ಥಾಪಿಸಲಾಗುತ್ತಿರುವ 110/11 ಕೆ.ವಿ. ವಿದ್ಯುತ್ ಉಪ ಕೇಂದ್ರದ ಜಮೀನಿನ ಖರೀದಿಗಾಗಿ ಜಮಖಂಡಿಯ ಉಪ ವಿಭಾಗಾಧಿಕಾರಿ ರವರಲ್ಲಿ ರೂ. 9,04,030/- ಗಳನ್ನು ದಿನಾಂಕ 5-6-2006ರಂದು ಕೆ.ಪಿ.ಟಿ.ಸಿ.ಎಲ್. ವತಿಯಿಂದ ಠೇವಣಿ ಇಡಲಾಗಿದೆ. ಜಮಖಂಡಿಯ ಉಪ ವಿಭಾಗಾಧಿಕಾರಿಗಳ ಮೂಲಕ ಜಮೀನಿನ ಮಾಲೀಕರಿಗೆ ಪರಿಹಾರ ವಿತರಣೆ ಆಗಬೇಕಾಗಿರುತ್ತದೆ.

ಉ)ಅನಗವಾಡಿ 33/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರಕ್ಕೆ ಜಮೀನು ನೀಡಿದ ರೈತರಿಗೆ ಬಾಗಲಕೋಟೆ ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರ್ ರವರ ಮೂಲಕ 1.79 ಲಕ್ಷ ರೂ.ಗಳನ್ನು ದಿನಾಂಕ 22-10-2002 ರಂದು ನೀಡಲಾಗಿದೆ.

ಅನಗವಾಡಿ 33/11 ಕೆ.ವಿ. ವಿದ್ಯುತ್ ಉಪ ಕೇಂದ್ರಕ್ಕೆ ಜಮೀನು ಮಾಲೀಕರಿಂದ 2 ಎಕರೆ ಖರೀದಿ ಮಾಡಿದ್ದು, ಕಂದಾಯ ಇಲಾಖೆಯು 2 ಎಕರೆ 10 ಗುಂಟೆ ಜಮೀನಿಗೆ ಡಿಮಾರ್ಕೇಷನ್ ಮಾಡಿಕೊಟ್ಟಿರುವುದರಿಂದ ತಂತಿ ಬೇಲಿ ಹಾಕಲಾಗಿದೆ. ಆದರೆ ಜಮೀನಿನ ಮಾಲೀಕರು 3 ಎಕರೆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆಯೆಂದು ಬೀಳಗಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಈ ಪ್ರಕರಣ ಈಗ ನ್ಯಾಯಾಲಯದ ಮುಂದಿದ್ದು, ನ್ಯಾಯಾಲಯದ ತೀರ್ಪಿನಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಕೋಲಾರ (ಮುಂಡಗನೂರು) 110/11 ಕೆ.ವಿ. ವಿದ್ಯುತ್ ವಿತರಣಾ

ಕೇಂದ್ರಕ್ಕೆ ಜಮೀನು ನೀಡಿದ ರೈತರು ಅಸಿಸ್ಟೆಂಟ್ ಕಮೀಷನರ್, ಜಮಖಂಡಿ ರವರ ಕಛೇರಿಯಿಂದ ಪರಿಹಾರ ರೂಪದಲ್ಲಿ ರೂ. 3,46880/- ಮೊತ್ತವನ್ನು ದಿನಾಂಕ 10-5-2007 ರಂದು ಮತ್ತು ರೂ. 20,154/- ಮೊತ್ತವನ್ನು ದಿನಾಂಕ 18-5-2007 ರಂದು ಪಡೆದಿರುತ್ತಾರೆ.

ಪ್ರಶ್ನೆ ಸಂಖ್ಯೆ : 71 (210) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ)

ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಬೆಳ್ತಂಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸೌತಡ್ಕ ಮಹಾಗಣಪತಿ ಮುಕ್ತ ಧಾರ್ಮಿಕ ಪ್ರೇಕ್ಷಣೀಯ ಸ್ಥಳಕ್ಕೆ ರಾಜ್ಯ ಮತ್ತು ಹೊರರಾಜ್ಯಗಳ ಪ್ರವಾಸಿಗರು ಮತ್ತು ಭಕ್ತ ಜನರು ಅಧಿಕ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದು ಮೂಲಭೂತ ಸೌಕರ್ಯಗಳನ್ನು ಇಲಾಖೆಯವರು ಒದಗಿಸಿಕೊಡಲು ಸರ್ಕಾರವು ಮುಂದಾಗುವುದೆ;

ಆ) ಈ ಕ್ಷೇತ್ರದ ದೇವಾಲಯವು ಯಾವುದೇ ಕಟ್ಟಡಗಳನ್ನು ಹೊಂದಿರದಿರುವ ಮುಕ್ತ ದೇವಳವಾಗಿದೆ, ಅಲ್ಲಿನ ಪ್ರಕೃತಿ ಸೌಂದರ್ಯವನ್ನು ನೋಡಲು ಕೂಡ ಹೆಚ್ಚಿನ ಜನರು ಭೇಟಿ ನೀಡುತ್ತಿರುವ ಕಾರಣ ಅತಿಥಿಗೃಹ ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಅವಶ್ಯಕ ವ್ಯವಸ್ಥೆಗಳನ್ನು ಇಲಾಕೆಯು ಒದಗಿಸಿಕೊಡಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಬಿ. ಶ್ರೀರಾಮಲು

ಅ) ಹೌದು

ಆ) ಭೇಟಿ ನೀಡುತ್ತಿರುವ ಪ್ರವಾಸಿಗರ ಅಂಕಿ ಸಂಖ್ಯೆಯನ್ನು ಗಮನಿಸಿ